

ಹೋದೆ. ಅಸಹಜವಾಗಿ ಉತ್ಪತ್ತಿಯಾಗುವ ಜೀವಕೋಶಗಳು ಕ್ಯಾನ್ಸರ್ ಆಗಿ ಬದಲಾಗಿರುವ ಅಂಶ ಬೆಳಕಿಗೆ ಬಂತು. ಬಯಾಪ್ಸಿ, ಅಲ್ಟ್ರಾಸೌಂಡ್, ಮ್ಯಾಮೊಗ್ರಫಿ, ಎಂಆರ್ಐ ಮಾಡಿಸಿಕೊಂಡ ಬಳಿಕ ಕ್ಯಾನ್ಸರ್ ಚಿಕಿತ್ಸೆ ಆರಂಭವಾಗಿ ಸರ್ಜರಿಯಲ್ಲಿ ಕೊನೆಗೊಂಡಿತು.

ಚಿಕಿತ್ಸೆ ವೇಳೆ ನೀಡುವ ಕಿಮೋಥೆರಪಿಯ ಅಡ್ಡಪರಿಣಾಮ ಬಹಳಷ್ಟು ಇರುತ್ತದೆ. ಆದರೆ ನಾನೆಂದೂ ಇದಕ್ಕೆ ಕುಗ್ಗಿಲ್ಲ. ಧೈರ್ಯವಾಗಿ ಎದುರಿಸಿದ್ದೀನಿ. ಆದರೂ ಹೊರಗೆ ಹೋಗುವಾಗ ಸ್ತನ ಇಲ್ಲವಲ್ಲ ಅಂತ ಬೇಜಾರು ಆಗುತ್ತೆ. ಮುಜುಗರವೂ ಆಗ್ತದೆ. ಎಲ್ಲರೂ ಪ್ರಶ್ನೆ ಕೇಳ್ತಿದ್ರು. ಏನಾಯ್ತು ಏನಾಯ್ತು ಅಂತ. ಆಗ ನಾನು ಪ್ರತಿಮಾ ಬೇಡಿ ತರಹ, ಉಮಾಭಾರತಿ ತರಹ ತಲೆಗೆ ಸ್ಕಾರ್ಫ್ ಕಟ್ಟಿಕೊಳ್ತೀನಿ ಅಷ್ಟೆ ಅಂತಿದ್ದೆ. ಕೆಲವೊಮ್ಮೆ ದೇವರಿಗೆ ಹೋಗಿದ್ದೆ ಅಂತಿದ್ದೆ. ಇಂಥ ಅನುಭವ ಕ್ಯಾನ್ಸರ್‌ಗೆ ಒಳಗಾದವರಿಗೆ ಸರ್ವೇಸಾಮಾನ್ಯ.

ಈಗ ಬ್ರೆಸ್ಟ್ ಜಾಗದಲ್ಲಿ ಪ್ರೋಸ್ಥೆಸಿಸ್ ಬಳಸಿದ್ದೀನಿ. ತಲೆಗೂದಲು ಉದುರಿ ಹೋಗಿರುವುದರಿಂದ ಸ್ಕಾರ್ಫ್ ಕಟ್ಟಿಕೊಂಡು ಹೋಗ್ತೀನಿ. ಬಹಳ ಹೆಮ್ಮೆಯ ವಿಚಾರ ಎಂದರೆ, ನನ್ನ ಮಗಳು ನನಗೆ ಬಹಳ ಸಪೋರ್ಟಿವ್. ನನ್ನ ತಲೆಗೂದಲು ಉದುರಿ ಹೋಗಿರುವುದರಿಂದ ಅವಳು ಕೂಡ ತಲೆ ಬೋಳಿಸಿಕೊಂಡು ನನಗೆ ಬೆಂಬಲ ನೀಡಿದ್ದಾಳೆ. ಇಂಥ ಮಗಳು ಎಲ್ಲರಿಗೂ ಸಿಗಲ್ಲ. ಈ ವಿಷಯದಲ್ಲಿ ನಾನು ಭಾಗ್ಯವಂತೆ.

ಗುಣಮುಖಳಾದ ಬಳಿಕ ಹೆಚ್ಚು ಸಕ್ರಿಯವಾಗಿ ಕೆಲಸ ಮಾಡ್ತಾ ಇದ್ದೀನಿ, ಮಂಡ್ಯ, ಧಾರವಾಡಗಳಲ್ಲಿ ಕ್ಯಾನ್ಸರ್ ರೋಗಿಗಳಿಗೆ

## ಟಾರ್ಗೆಟೆಡ್ ಥೆರಪಿ

ಕಿಮೋಥೆರಪಿ, ರೇಡಿಯೇಷನ್ ಥೆರಪಿ ಇಲ್ಲದೆಯೂ ಸ್ತನ ಕ್ಯಾನ್ಸರ್ ಅನ್ನು ಗುಣಪಡಿಸುವ ಸಾಧ್ಯತೆಯಿದೆ. ಪರ್ಸನಲೈಸ್ಡ್ ಟಾರ್ಗೆಟೆಡ್ ಥೆರಪಿ ಸ್ತನ ಕ್ಯಾನ್ಸರ್‌ನಿಂದ ಬಳಲುವ ಮಹಿಳೆಯರಿಗೆ ವರದಾನ. ಈ ಚಿಕಿತ್ಸೆಯಿಂದ ಆರಂಭದ ಹಂತದಲ್ಲಿರುವ ಶೇ. 90ರಷ್ಟು ಸ್ತನ ಕ್ಯಾನ್ಸರ್ ರೋಗಿಗಳು ಗುಣಮುಖರಾಗಬಹುದು.

ಸ್ತನ ಕ್ಯಾನ್ಸರ್ ಬೇರೆ ಬೇರೆ ವಿಧದಲ್ಲಿ, ಮಹಿಳೆಯರ ದೇಹ ಪ್ರಕೃತಿಗೆ ಅನುಗುಣವಾಗಿ ವಿಭಿನ್ನವಾಗಿರುತ್ತದೆ. ಬೇರೆ ಬೇರೆ ಹಂತಗಳಲ್ಲಿಯೂ ಇರಬಹುದು. ರೋಗಿಯ ಕ್ಯಾನ್ಸರ್ ಪರಿಸ್ಥಿತಿ ನೋಡಿಕೊಂಡು ಈ ಥೆರಪಿ ನೀಡಲಾಗುತ್ತದೆ.

ಮುಖ್ಯವಾಗಿ ಹಾರ್ಮೋನ್ ರಿಫೆಕ್ಟರ್ ಪಾಸಿಟಿವ್ ಬ್ರೆಸ್ಟ್ ಕ್ಯಾನ್ಸರ್, ಹಾಲ್ವೀವ್ ಪಾಸಿಟಿವ್ ಬ್ರೆಸ್ಟ್ ಕ್ಯಾನ್ಸರ್ ಹಾಗೂ ಟ್ರಿಪ್ಪಲ್ ನೆಗೆಟಿವ್ ಬ್ರೆಸ್ಟ್ ಕ್ಯಾನ್ಸರ್ ಎಂಬ ಮೂರು ವಿಧಗಳ ಸ್ತನ ಕ್ಯಾನ್ಸರ್‌ಗಳಿವೆ. ಹಿಂದೆ ಈ ಎಲ್ಲ ವಿಧದ ಕ್ಯಾನ್ಸರ್‌ಗಳಿಗೆ ಕಿಮೋಥೆರಪಿ, ರೇಡಿಯೇಷನ್ ಥೆರಪಿ ನೀಡಲಾಗುತ್ತಿತ್ತು. ಅದು ಯಾತನಾಮಯವೂ ಆಗಿತ್ತು. ಪರ್ಸನಲೈಸ್ಡ್ ಟಾರ್ಗೆಟೆಡ್ ಥೆರಪಿಯಲ್ಲಿ ರೋಗಿಗೆ ಕ್ಯಾನ್ಸರ್ ಯಾವ ಹಂತದಲ್ಲಿ ಹಾಗೂ ಇದಕ್ಕೆ ಯಾವ ಚಿಕಿತ್ಸೆ ಅಗತ್ಯವಿದೆ ಎಂದು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ. ರೋಗಿಯ ವಯಸ್ಸನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅಲ್ಲದೆ, ರೋಗಿಯು ಬಿಪಿ, ಮಧುಮೇಹ, ಹೃದಯ ಸಮಸ್ಯೆ ಸೇರಿದಂತೆ ಇತರೆ ಕೊಮಾರ್ಬಿಡಿಟಿ ಸಮಸ್ಯೆಯಿಂದ ಬಳಲುತ್ತಿರುವರೇ ಎಂಬುದನ್ನು ಗಮನಿಸಲಾಗುವುದು. ಈ ರೀತಿಯ ವೈಯಕ್ತಿಕ ವಿವರ ಪಡೆದ ಬಳಿಕ ನೀಡುವ ಥೆರಪಿಯೇ ಪರ್ಸನಲೈಸ್ಡ್ ಥೆರಪಿ. ಇದು ಮಹಿಳೆಯರು ಯಾವುದೇ ಭಯವಿಲ್ಲದೇ ಮಾಡಿಸಿಕೊಳ್ಳಬಹುದಾದ ಚಿಕಿತ್ಸೆ.

ಒಮ್ಮೆ ರೋಗಿಯ ವಿವರ ಪಡೆದ ಬಳಿಕ ಸ್ತನ ಕ್ಯಾನ್ಸರ್‌ಗೆ ಯಾವ ಚಿಕಿತ್ಸೆ ಸೂಕ್ತ ಎಂದು ಮೆಡಿಕಲ್ ಆಂಕಾಲಜಿಸ್ಟ್ ನಿರ್ಧರಿಸುತ್ತಾರೆ. ಈ ಚಿಕಿತ್ಸೆ ಎಲ್ಲಾ ವಯಸ್ಸಿನವರಿಗೂ ಸೂಕ್ತವೆನಿಸುವುದಿಲ್ಲ. ಏಕೆಂದರೆ, ಸಣ್ಣ ವಯಸ್ಸಿನವರಿಗೆ ಸಂಪೂರ್ಣ ಸ್ತನ ತೆಗೆಯುವುದರಿಂದ ಅವರು ಮಾನಸಿಕವಾಗಿ ಕುಗ್ಗಬಹುದು. ಹೀಗಾಗಿ ರೋಗಿಯ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಂಡು ಚಿಕಿತ್ಸಾ ವಿಧಾನವನ್ನು ಆಯ್ಕೆ ಮಾಡಿಕೊಳ್ಳುವರು. ಟಾರ್ಗೆಟೆಡ್ ಥೆರಪಿ ಮಾಡುವುದರಿಂದ ಯಾವುದೇ ರೀತಿಯ ಸಮಸ್ಯೆ ಆಗುವುದಿಲ್ಲ. ಕೇವಲ ಕ್ಯಾನ್ಸರ್‌ಕಾರಕ ಗಡ್ಡೆಗಳನ್ನು ಮಾತ್ರ ಗುಣಪಡಿಸಲಾಗುವುದು.

ವಯಸ್ಸಾದ ಕೆಲ ಮಹಿಳೆಯರಿಗೆ ಸ್ತನ ಕ್ಯಾನ್ಸರ್ ಬಂದಿದ್ದರೂ ಕಿಮೋಥೆರಪಿ ನೀಡುವುದು ಅಸಾಧ್ಯ. ಇಂಥ ಮಹಿಳೆಯರಿಗೆ ಹಾರ್ಮೋನ್ ಮಾತ್ರೆಗಳನ್ನು ನೀಡಲಾಗುವುದು. ರೇಡಿಯೇಷನ್ ಕೂಡ ನೀಡಲಾಗುವುದಿಲ್ಲ. ಸ್ತನ ಕ್ಯಾನ್ಸರ್ ಉಲ್ಬಣವಾಗಿದ್ದರೂ ಕಿಮೋಥೆರಪಿ ಇಲ್ಲದೆ ಗುಣಪಡಿಸಲಾಗುವುದು ಎನ್ನುತ್ತಾರೆ ತಜ್ಞರು.